**OS-305/2016 DW.1**

ದಿನಾಂಕ 21.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು ಃ</u>** ವಾದಿಯ ಪರ ವಕೀಲರಿಂದ ಃ-

ನನ್ನ ಸೊಸೆ ಈ ದಾವೆಯನ್ನು ಜಮೀನಿಗಾಗಿ ಹಾಕಿರುತ್ತಾರೆ. ದಿಃ 10.09.2008 ರಲ್ಲಿ ಆದ ಪಾಲು ವಿಭಾಗದಲ್ಲಿ ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. 1 ಮತ್ತು 2 ನೇ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯು ನನಗೆ ಅಕ್ರಮವಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ನನ್ನ ಮಗ ಮತ್ತು ಸೊಸೆ ಪ್ರತ್ಯೇಕವಾಗಿ ವಾಸ ಮಾಡುತ್ತಿರುತ್ತಾರೆಂದರೆ ಸರಿ. ಇದೇ ನ್ಯಾಯಾಲಯದಲ್ಲಿ ನನ್ನ ಸೊಸೆ ನನ್ನ ಮಗನ ವಿರುದ್ಧ ಜೀವನಾಂಶ ಕೋರಿ ಕೇಸನ್ನುಹಾಕಿರುತ್ತಾರೆಂರದೆ ಸಾಕ್ಷಿ 4-6 ಕೇಸು ಹಾಕಿರುತ್ತಾರೆಂದು ನುಡಿಯುತ್ತಾರೆ.

ನನ್ನ ಸೊಸೆಗೆ ನಾನು ಯಾವುದೇ ಜೀವನಾಂಶವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಅದನ್ನು ನನ್ನ ಮಗ ಕೊಡಬೇಕು ಎಂದು ನುಡಿಯುತ್ತಾರೆ. ನನ್ನ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ.

ಈ ಹಂತದಲ್ಲಿ ವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ಸಾಕಷ್ಟು ಕಾಲವಕಾಶ ನೀಡಿದ್ದರೂ ಸಹ ಮತ್ತು ಯಾವುದೇ ಸಕಾರಣಗಳು ಕಂಡು ಬಾರದ ಕಾರಣ ತಿರಸ್ಕರಿಸಲಾಯಿತು.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

**OS-305/2016 DW.1**

ದಿನಾಂಕ 21.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು :** ವಾದಿಯ ಪರ ವಕೀಲರಿಂದ :-

ನನ್ನ ಹೆಂಡತಿ ಭವ್ಯ ಈ ದಾವೆಯನ್ನು ಜೀವನಾಂಶ ಕೋರಿ ಸಲ್ಲಿಸಿರುತ್ತಾರೆ. ನನ್ನ ಹೆಂಡತಿ ಮತ್ತು ನನ್ನ ಮಗಳು ನನ್ನ ವಿರುದ್ಧ ಈ ದಾವೆಯನ್ನು ಪಾಲು ವಿಭಾಗ ಕೋರಿ ಹಾಕಿರುತ್ತಾರೆಂದರೆ ಸರಿ. ದಿಃ 10.09.2008 ರಲ್ಲಿ ಆದ ವಿಭಾಗದಲ್ಲಿ ದಾವಾ ಆಸ್ತಿಗಳು ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ದಿಃ 14.03.2012 ರಂದು 1 ಮತ್ತು 2 ನೇ ದಾವಾ ಆಸ್ತಿಗಳನ್ನು ಅಕ್ರಮವಾಗಿ 2 ನೇ ಪ್ರತಿವಾದಿಗೆ ಮಾರಿರುತ್ತೇನೆ ಎಂದರೆ ಸಾಕ್ಷಿಯು ಅಕ್ರಮವಾಗಿ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ಸಾಲವನ್ನು ತಿರುವಳಿ ಮಾಡಲು ನಾನು ಸದರಿ ಕ್ರಯಪತ್ರವನ್ನು ಬರೆದು ಕೊಟ್ಟಿರುತ್ತೇನೆ. ನನ್ನಮತ್ತು ನನ್ನ ಹೆಂಡತಿ ನಡುವೆ ಸರಿಬಾರದ ಕಾರಣ ನನ್ನ ಹೆಂಡತಿ ಬೇರೆ ವಾಸ ಮಾಡುತ್ತಿದ್ದಾರೆಂದರೆ ಸಾಕ್ಷಿಯು ಮದುವೆಯಾದ ಕೆಲ ತಿಂಗಳ ನನ್ನ ಜೊತೆ ಇದ್ದು ನಂತರ ಬೈರಾಪುರದ ಅವರ ತವರು ಮನೆಯಲ್ಲಿ ವಾಸ ಮಾಡುತ್ತಿರುತ್ತಾರೆಂದು ನುಡಿಯುತ್ತಾರೆ. ನಾನು ಇದುವರೆಗೂ ನನ್ನ ಹೆಂಡತಿ ಮತ್ತು ಮಗಳಿಗೆ ಯಾವುದೇ ಜೀವನಾಂಶ ಒದಗಿಸಿರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣಪತ್ರಕ್ಕೆ ವಕೀಲರಾದ ವಿಶ್ವನಾಥ ರವರು ಮಾಹಿತಿ ಕೊಟ್ಟಿರುತ್ತಾರೆ.

ಈ ಹಂತದಲ್ಲಿ ವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ಸಾಕಷ್ಟು ಕಾಲವಕಾಶ ನೀಡಿದ್ದರೂ ಸಹ ಮತ್ತು ಯಾವುದೇ ಸಕಾರಣಗಳು ಕಂಡು ಬಾರದ ಕಾರಣ ತಿರಸ್ಕರಿಸಲಾಯಿತು.

**OS-305/2016 DW.1**

**ಮರು ವಿಚಾರಣೆಃ** ಇರುವುದಿಲ್ಲ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.